ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಈ ರಸ್ತೆಯ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಗುತ್ತಿಗೆ ಸ್ವೀಕರಿಸುವುದಕ್ಕೆ ಕೊನೆಯ ದಿನಾಂಕ ೨೧-೬-೧೯೯೦ ರಂದು ನಿಗದಿಪಡಿಸಲಾಗಿದೆ. ಗುತ್ತಿಗೆ ತೀರ್ಮಾನದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಈ ರಸ್ತೆಯ ವಿಸ್ತರಣಾಕಾರ್ಯಕ್ಕೆ ಅಂದಾಜು ೨೮.೦೦ ಲಕ್ಷ ರೂ.ಗಳು.

ಕೊಂಕಣ ರೈಲ್ವೆ ಯೋಜನೆ

೧೫೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಂಕಣ ರೈಲ್ವೆ ಯೋಜನೆಯಲ್ಲಿ ರಾಜ್ಯ ಸರ್ಕಾರವು ಬಂಡವಾಳವನ್ನು ತೊಡಗಿಸಲು ಹಾಗೂ ಈ ಯೋಜನೆಯಲ್ಲಿ ಭಾಗವಹಿಸಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರದ ನಿಲುವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಈ ಯೋಜನೆಯಲ್ಲಿ ಭಾಗವಹಿಸಲು ಕರ್ನಾಟಕ ಸರ್ಕಾರವು ತತ್ವಶಃ ಒಪ್ಪಿಕೊಂಡಿದೆ.

ರಾಜ್ಯದ ಜಲಾನಯನ ಪ್ರದೇಶದಲ್ಲಿ ಭೂಮಿ ಚೌಳಾಗಿ ವ್ಯವಸಾಯಕ್ಕೆ ಯೋಗ್ಯವಾಗದೇ ಇರುವುದು

೧೪೬. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಜಲಾನಯನ ಪ್ರದೇಶ (ಕಾಡಾ)ಗಳಲ್ಲಿ ಹೆಚ್ಚು ನೀರಿನ ಉಪಯೋಗದಿಂದ ಭೂಮಿ ಚೌಳಾಗಿ ವ್ಯವಸಾಯಕ್ಕೆ ಯೋಗ್ಯವಾಗದೇ ಇರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಭೂಮಿ ಚೌಳಾಗುವುದನ್ನು ತಡೆಯಲು ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರತಿ ಕಾಡಾದಲ್ಲಿ ಜಾಗು ಮತ್ತು ಚೌಳು ಆಗಿರುವ ಒಟ್ಟು ಕ್ಷೇತ್ರವನ್ನು ಈ ಕೆಳಗೆ ನಮೂದಿಸಿದೆ.

೧	ಕಾಡಾ ಕಾವೇರಿ ಜಲಾನಯನ ಯೋಜನೆಗಳು	... ೧೬೫೫೫ ಹೆಕ್ಟೇರ್
೨	ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು	... ೮೬೦೬ ಹೆಕ್ಟೇರ್
೩	ಕಾಡಾ ಕೃಷ್ಣಾ ಮೇಲ್ದಂಡೆ ಯೋಜನೆ	... ೫೮೧ ಹೆಕ್ಟೇರ್
೪	ಕಾಡಾ ಭದ್ರಾ ಯೋಜನೆ	... ೧೨೧೦೦ ಹೆಕ್ಟೇರ್
೫	ಕಾಡಾ ತುಂಗಭದ್ರಾ ಯೋಜನೆ	... ೩೭೬೪೫ ಹೆಕ್ಟೇರ್

ಭೂಮಿ ಜೌಗು ಮತ್ತು ಚೌಳಾಗುವುದನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳು.—

೧) ಬೆಳೆಗಳಿಗೆ ಅಗತ್ಯವಿರುವಷ್ಟೇ ನೀರನ್ನು ಬಳಸಲು ರೈತರಿಗೆ ತಿಳಿಸಲಾಗಿದೆ.

೨) ಹೆಚ್ಚು ನೀರು ಬಳಸುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ರೈತರಿಗೆ ತಿಳುವಳಿಕೆ ಕೊಡಲಾಗಿದೆ.

೩) ಬೆಳೆ ಪದ್ಧತಿಯನ್ನು ಉಲ್ಲಂಘಿಸದಿರಲು ಮತ್ತು ಲೋಕಲೈಜೇಷನ್ ಪದ್ಧತಿಯನ್ನು ಅನುಸರಿಸಲು ರೈತರಿಗೆ ತಿಳುವಳಿಕೆ ನೀಡಲಾಗಿದೆ.

೪) ಆರೆ ನೀರಾವರಿ ಬೆಳೆಗಳನ್ನೇ ಬೆಳೆಯಲು ಮತ್ತು ಜೌಗಿನಿಂದ ಕೂಡಿದ ಹಾಗೂ ಭತ್ತ ಬೆಳೆಯಲು ಲೋಕಲೈಜ್ ಆಗಿರುವ ಕ್ಷೇತ್ರದಲ್ಲಿ ಮಾತ್ರ ಭತ್ತ ಬೆಳೆಯಲು ರೈತರಿಗೆ ತಿಳಿಸಲಾಗಿದೆ.

೫) ಬೆಳೆ ಪರಿವರ್ತನಾ ಪದ್ಧತಿಯನ್ನು ಅನುಸರಿಸುವುದರಿಂದ ಪ್ರತಿ ವರ್ಷ ಭತ್ತ ಬೆಳೆಯುವುದನ್ನು ತಪ್ಪಿಸಿದಂತಾಗುವುದರ ಜೊತೆಗೆ ಭೂಮಿಯ ಫಲವತ್ತತೆಯನ್ನು ಸುಧಾರಿಸಬಹುದೆಂದು ರೈತರಿಗೆ ತಿಳುವಳಿಕೆ ನೀಡಲಾಗಿದೆ.

೬) ಹೆಚ್ಚಿನ ನೀರನ್ನು ಜಮೀನಿನಿಂದ ಹೊರದೂಡಲು ಬಸಿಗಾಲುವೆಗಳನ್ನು ನಿರ್ಮಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಿಂದ ಭೂಮಿಯು ಜೌಳಾಗುವುದನ್ನು ತಡೆಯಬಹುದಾಗಿದೆ.

ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಸಮುದ್ರ ಕೊರೆತದಿಂದ ಆದ ನಷ್ಟ

೧೫೨. ಶ್ರೀ ವಿಜಯಕುಮಾರಶೆಟ್ಟಿ (ಸುರತ್ಕಲ್).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ತಾಲ್ಲೂಕಿನ ಕೂಳೂರಿನಿಂದ ಬಂಗ್ರ ಕೂಳೂರು ಮುಕ್ಕ ಪಣಂಬೂರು ಮತ್ತಿತರ ವ್ಯಾಪಕ ಸಮುದ್ರ ಕೊರೆತ ಉಂಟಾಗಿದ್ದು ಸಾರ್ವಜನಿಕರ ಅಪಾರ ಆಸ್ತಿಯು ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಮುದ್ರ ಕೊರೆತ ತಡೆಯಲು ಸರ್ಕಾರ ಕೈಗೊಂಡ ಶಾಶ್ವತ ಹಾಗೂ ತಾತ್ಕಾಲಿಕ ಕಾರ್ಯಕ್ರಮಗಳೇನು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಬಂದಿದೆ.

ಆ) ಕೂಳೂರಿನಿಂದ ಬಂಗ್ರಕೂಳೂರವರೆಗೆ ಸಮುದ್ರ ಕೊರೆತದ ಹಾವಳಿ ಅಷ್ಟಾಗಿ ಇರುವುದಿಲ್ಲ. ಪಣಂಬೂರು ಪ್ರದೇಶದ ನವಮಂಗಳೂರು ಬಂದರು ಮಂಡಳಿ ಆಡಳಿತಕ್ಕೆ ಒಳಪಟ್ಟಿರುವುದರಿಂದ ಇಲ್ಲಿನ ಸಮುದ್ರ ಕೊರೆತದ ಸಮಸ್ಯೆಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ.

ಮುಕ್ಕದ ಸಮೀಪ ಸಸಿಹಿತ್ಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣವು ೧೯೬೯ರಿಂದ ಪ್ರಾರಂಭಗೊಂಡಿದ್ದು ಇದುವರೆಗೆ ೨.೦೨ ಕಿ. ಮೀ. ಉದ್ದದ ತಾತ್ಕಾಲಿಕ ತಡೆಗೋಡೆ ಹಾಗೂ ೦.೪೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ಪೂರ್ಣಗೊಂಡಿದೆ. ೦.೬ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿದ್ದು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ೦.೨೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಾಣದ ಕಾಮಗಾರಿಯು ಸೇರಿರುತ್ತದೆ.

ಸುರತ್ಕಲ್ ಸಮೀಪ ಕುಳಾಯಿ ಎಂಬಲ್ಲಿ ೦.೧೫ ಕಿ. ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ೦.೧೫ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ಸೇರಿರುತ್ತದೆ.

ಸುರತ್ಕಲ್ ಸಮೀಪ ಗುಡ್ಡೆಕೊಪ್ಪ ಎಂಬಲ್ಲಿ ೦.೧೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಸೇರಿರುತ್ತದೆ.

೧೯೯೦-೯೧ನೇ ಸಾಲಿನಲ್ಲಿ ಪ್ರಾರಂಭಿಸುವ ಹೊಸ ನೀರಾವರಿ ಯೋಜನೆಗಳು

೧೫೩. ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೦-೯೧ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ತೀರ್ಮಾನಿಸಿದ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅವು ಯಾವುವು ಮತ್ತು ಅವುಗಳ ಅಂದಾಜು ವೆಚ್ಚ ಎಷ್ಟು?